ತಾರೀಖು 12ನೇ ಅಕ್ಟೋಬರ್ 1887.

ತಪ್ಪು ತಿದ್ದುಪಡಿ.

ನಂ. 134.—ಸ್ಯ 1884ನೇ ಇಸವಿ ಜೂ 28ನೇ ಮಕ್ತುಮಿನ ಮೈಸೂರು ಗೆಜೆಟ್ಟಿನ IIIನೇ ಭಾಗದಲ್ಲಿ ಪ್ರಾಯಿಷ್ಠಾದ ಕನ್ನಡ ಸಿನಿಲ್ ಪ್ರೊಸಿಜ್ಯೂರ್ ಕೋಡಿನ 629ನೇ ಸೆಕ್ಷನಿನ 8ನೇ ಪಂಜ್ತಿಯಲ್ಲಿ "ಅಂಗೀಕಾರ ವಾಗಲಾರದೆಂಬ" ಯಂಬ ಮಾತುಗಳಿಗೆ ಬದಲಾಗಿ "ಅಂಗೀಕಾರವಾಗ ಬಹುದೆಂಬ" ಯಂದು ಓದಿಕೊಳ್ಳತಕ್ಕದ್ದು.

ತಾರೀಖು 10ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1458.—ಮೊಹರೀ ಮಜಕೂರ್ 7ನೇ ಮಕ್ತುಂ ಕ್ಯಾಂಪ್ 1430ನೇ ನಂಬರುಳ್ಳ ಇಸ್ತಿಹಾರನ್ನನುಸರಿಸಿ, ಮೆಸ್ಟರ್ ವಿ. ಪಿ. ಮಾಧವರಾಯರು ರಜಾಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ ಮೆ|| ಬಿ. ತಿರುಮಲಾಚಾರ್ ಬಿ. ಎ. ಯವರು ಸವೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟು ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಅಕ್ಟೋಬರ್ 1887.

ನಂ. 135.—ಮದ್ದಗಿರೀ ತಾಲ್ಲೂಕು ಅಮಲ್ದಾರ್ ವೇಲಾಯುಧಂ ಪಿಳ್ಳೈಯವರಿಗೆ, ಮೆಡಿಕಲ್ ಸರಟಿಫಿಕೇಟ್ ಮೇಲೆ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ವೇಲಾಯುಧಂ ಪಿಳ್ಳೈಯವರು ರಜಾದಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ ತುಮಕೂರು ಡೆಪ್ಯುಟಿ ಕಮ್ಮಿಷನರ್ ಆಫೀಸಿನ ಹೆಡ್ ಅ|| ಗೋಪಾಲಯ್ಯಂಗಾರ್ರು ಮದ್ದಗಿರೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 136.—ಮಂಡ್ಯ ತಾಲ್ಲೂಕು ಅಮಲ್ದಾರ್ ನರಸಿಂಗನವರಿಗೆ, 1887ನೇ ಇಸವಿ ಜುಲೈ 11ನೇ ಮಕ್ತುಮಿನ 53ನೇ ನಂಬರುಳ್ಳ ಇಸ್ತಿಹಾರಿನಿಂದ ಕೊಡೋಣಾದ ಒಂದು ತಿಂಗಳ ಪ್ರಿವಿಲೀಜ್ ರಜಾವಿಗೆ ಜಾಸ್ತಿಯಾಗಿ 2 ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ಬಮೋಜೀಬ್ ಹುಕ್ಕುಂ,
ಆರ್. ವಿಜಯಿಂದ್ರರಾವ್,
ಚೀಫ್ ಸೆಕ್ರಿಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್. ರೆವಿನ್ಯೂ ಇಲಾಖೆ.

ಆರ್ಡರ್ ನಂಬರ್ 3786—95—101 ಮಕ್ತುಂ 1ನೇ ಸೆಪ್ಟೆಂಬರ್ 1887ನೇ ಇಸವಿ ಮೊಕ್ತಾಂ ಬೆಂಗಳೂರು.

1887ನೇ ಇಸವಿ ಫಿಬ್ರವರೀ 11ನೇ ಮಕ್ತುಂ 341ನೇ ನಂಬರು ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೆ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮೀರ್ಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇಷನ್‌ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡುತ್ತಿದೆ. ಇನಾಂದಾರರು ಸಾಧಾರಣವಾಗಿ ಈ ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಪ್ರಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮೀರ್ಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮಂ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಡವಳಿಕೆಯನ್ನು ಮುಂಜಾಗ್ರಾಡುವದರಲ್ಲಿ ಗವರ್ನಮೆಂಟಿನವರು ಸದರೀ ನಡವಳಿಕೆಯಿಂದ ಪ್ರಾಯಿದೆ ಪಡಿಯುವ ತಮ್ಮಾಂ ಇನಾಂದಾರರಿಗೂ ತಿಳಿಸುವದೇನಂದರೆ ಸದರೀ ಇನಾಂದಾರರು ಅವರ ಕೆರೆಗಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅವುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೂ ಖಂಡಿತವಾಗಿ ಜವಾಬ್ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಆಗವಚ್ಚು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷನ್‌ಗಳು ಸರ್ವೇಕಾಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇರ್ಷ ಸೆಸ್ಸ್‌ಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮ್ಮೀಗಳ ಐಯಿಂದ ಕರಾವ್ ಆಗತಕ್ಕ ಸರ್ವೇ ಆಕಾರದಲ್ಲಿ ಬದಸ್ತೂರು ಕೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇರ್ಷ ಸೆಸ್ಸ್‌ಗೆ ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮ್ಮೀ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟ್ ಯಿರಿಗೇರ್ಷ ಫಂಡ್" ಹೆಡ್ಡಿಗೆ ಲೆಕ್ಕದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮಿನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ವದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇರ್ಷ ಸೆಸ್ಸ್‌ಯಾನೆ ನೀರು ಸರದಿಯನ್ನು ಕರಾವ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೇಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮಿನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮಿನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಕರಾವ್ ಮಾಡಲ್ಪಡಬಹುದಾದ ಯಾವದಾರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ವಂದಕ್ಕೆ ವಧಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮಕ್ಕುಂ 72ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಹೂಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇರ್ಷ ಸೆಸ್ಸ್ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಗೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳ್ದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ನಾಗುವಳ್ಳೇ ಆಗುವ ತರೀ ಜಮಿನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ಪೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ಯೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಪೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವಳಿಕೆ ಬಗ್ಗೆ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮ್ಮೀ ಮೇಲೆ ವಸೂಲಾಗುವ ನೀರು ಸರದಿಯನ್ನ ನಿಲ್ಲಿಸಿ ಯಿಡತಕ್ಕ ಬಗ್ಗೆ, 1881ನೇ ಇಸವಿ ಡಿಸಂಬರ್ 17ನೇ ಮಕ್ಕುಂ 7416—225ನೇ ನಂಬರ್‌ವುಳ್ಳ ಪ್ರೊಸಿಡಿಂಗ್ಸ್‌ನಲ್ಲಿ ಕಂಡ ಹುಕ್ಕುಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮ್ಮೀಗಳ ಬಾಬತು ಬರತಕ್ಕ ಬಾಕೀಯಂತೆ ಲೆಕ್ಕದಲ್ಲಿ ನಮೂದಾಗಿರುವ ಮೊಬಲಗು, ಈಗ ಮಂಜೂರ್ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳು ಈ ಆಫೀಸಿಗೆ ಕ್ರಮವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೇ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮನುಸರಿಸಿ ಯಿರಿಗೇಷನ್ ಸೆಸ್ಸ್ ಯಾ ಅದಕ್ಕೆ ಸಮಾನ ಮೊಬಲಗನ್ನು ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನು ವಿನಾಯಿಸತಕ್ಕದ್ದೋ ಆ ವಿಷಯದಲ್ಲಿ ಡಿಸ್ಟ್ರಿಕ್ಟ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಿಗೆ ಬರದು ವ್ಯವಸ್ಥೇ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ಇನ್ಸ್ಟ್ರುಮೆಂಟ್.

ತಾರೀಖು 12ನೇ ಅಕ್ಟೋಬರ್ 1887.

ನಂ. 4472—915.—ಶಿವಮೊಗ್ಗಾ ಡಿವೀರ್ಜ ಯಗ್ಜಿಕ್ಯೂಟಿವ್ ಇಂಜನೀರ್ ಮೆ|| ಎ. ಯಸ್. ನಾಗೌಕರ್‌ಯವರಿಗೆ, 1887ನೇ ಇಸವಿ ಅಕ್ಟೋಬರ್ 24ರ ಲಾಗಾಯತು ನವಂಬರ್ 30ರ ವರಿವಿಗೆ ಯರಡು ದಿನಗಳೂ ಶೇರಿ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ,

ಮೆ|| ನಾಗೌಕರ್ ಯವರು ರಜಾದಮೇಲೆ ಗೈರ್ ಹಾಜರ್ ಇರುವ ಕಾಲದಲ್ಲಿ ಅ|| ಇಂಜನೀರು ಮೆ|| ವೆಂಕಟಾಚಾರ್ಯರು ಶಿವಮೊಗ್ಗಾ ಯಗ್ಜಿಕ್ಯೂಟೀವ್ ಇಂಜನೀರ್ ಕೆಲಸ ನೋಡತಕ್ಕದ್ದು.

ಹುಕ್ಕುಂ ಬಮೋಜೀಬ್,
ಸಿ. ಬೋರ್ಪ್, ಲೆ|| ಕರ್ನಲ್. ಆರ್. ಇ.
ಮೈಸೂರು ಗವರ್ಮೆಂಟ್ ಸೆಕ್ರೆಟೇರಿ.